ದಿನಾಂಕಃ 25-11-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ವಿ ಡಿ ವಕೀಲರಿಂದ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳು ಗೊತ್ತು. ದಾವಾ ಸ್ವತ್ತಿನ ಮೂಲ ಸರ್ವೆ ನಂ 20/4. ಸದರಿ ಸರ್ವೆ ನಂ ಗುರುವಡೇರಹಳ್ಳಿ ಗ್ರಾಮಕ್ಕೆ ಸೇರಿದ್ದು. ಸದರಿ ಸರ್ವೆ ನಂ ನ ವಿಸ್ತೀರ್ಣ 28 ಗುಂಟೆ ಇತ್ತು. ಸದರಿ ಸ್ವತ್ತು ಮಹದೇವಮ್ಮರವರಿಗೆ ಸೇರಿತ್ತು. ಅವರಿಂದ ನನ್ನ ತಾಯಿ ಕ್ರಯಕ್ಕೆ ಕೊಂಡುಕೊಂಡರು. ಮಹದೇವಮ್ಮರವರ ಮುಂಚೆ ಸದರಿ ಸ್ವತ್ತು ಯಾರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಮಹದೇವಮ್ಮ ಸದರಿ ಸ್ವತ್ತನ್ನು ಯಾರ ಕಡೆಯಿಂದ ಕೊಂಡುಕೊಂಡರು ನನಗೆ ಗೊತ್ತಿಲ್ಲ. ಮಹದೇವಮ್ಮ ದಾವಾ ಸ್ವತ್ತನ್ನು ಕೊಂಡುಕೊಂಡಾಗ ಅದು ಸರ್ವೆ ನಂ ನಲ್ಲಿ ಇತ್ತು ಅಥವಾ ನಿವೇಶನವಾಗಿ ಪರಿವರ್ತನೆಗೊಂಡಿತ್ತು ನನಗೆ ಗೊತ್ತಿಲ್ಲ. ಆದರೆ ನನ್ನ ತಾಯಿ ಕೊಂಡಾಗ ನಿವೇಶನವಾಗಿ ಪರಿವರ್ತನೆಗೊಂಡಿತ್ತು. ಸರ್ವೆ ನಂ 20/4 ಯಾವ ಅವಧಿಯಲ್ಲಿ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಆಯಿತು ಮತ್ತು ಅದರಲ್ಲಿ ಎಷ್ಟು ನಿವೇಶನಗಳನ್ನು ಮಾಡಲಾಗಿತ್ತು ನನಗೆ ಗೊತ್ತಿಲ್ಲ.

ನನ್ನ ತಾಯಿ ಲಕ್ಷ್ಮಮ್ಮ ದಾವಾ ಸ್ವತ್ತನ್ನು ನನ್ನ ಪರವಾಗಿ ದಾನ ಮಾಡಿದ್ದಾರೆ. ಸದರಿ ದಾನ ಪತ್ರ ದಿಃ 24.04.2015 ರಂದು ಆಗಿದೆ. ದಾನ ಪತ್ರಕ್ಕೆ ಶೈಲಜಾ ಮತ್ತು ರಮೇಶಪ್ಪ ಮತ್ತು ಸುಜಾತ ಮತ್ತು ಗೋವಿಂದಪ್ಪ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಬೇರೆ ಯಾರು ಸಾಕ್ಷಿ

ಹಾಕಿದ್ದಾರೆ ನನಗೆ ಗೊತ್ತಿಲ್ಲ. ದಾನ ಪತ್ರ ವನ್ನು ಯಾರು ಬರೆದರು ನನಗೆ ಗೊತ್ತಿಲ್ಲ

ನನ್ನ ತಾಯಿ ದಾವಾ ಸ್ವತ್ತನ್ನು ಯಾವ ದಿನ ಯಾವ ವರ್ಷ ಕ್ರಯಕ್ಕೆ ಪಡೆದುಕೊಂಡರು ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ಮತ್ತು ಸದರಿ ಪತ್ರ ವನ್ನು ಯಾರು ತಯಾರಿಸಿದ್ದಾರೆ ನನಗೆ ಗೊತ್ತಿಲ್ಲ ದಾವಾ ಸ್ವತ್ತಿನ ಖಾತೆ ನಂ 642. ದಾವಾ ಸ್ವತ್ತಿನ ಅಳತೆ ಪೂರ್ವ–ಪಶ್ಚಿಮ 52 ಅಡಿ, ದಕ್ಷಿಣದ ಕಡೆಗೆ 60 ಅಡಿ, ಉತ್ತರ – ದಕ್ಷಿಣ 30 ಅಡಿ ಇದೆ. ದಾವಾ ಸ್ವತ್ತಿನ ಚಕ್ ಬಂದಿ ಪೂರ್ವಕ್ಕೆ ದೊಡ್ಡಹನುಮಂತಪ್ಪ ನವರ ಮನೆ. ಪಶ್ಚಿಮಕ್ಕೆ 30 ಅಡಿ ರಸ್ತೆ. ಉತ್ತರಕ್ಕೆ ನಿವೇಶನದ ನಂ 37. ದಕ್ಷಿಣಕ್ಕೆ ನಿವೇಶನದ ನಂ 39. ಪ್ರತಿವಾದಿ ನಿವೇಶನದ ನಂ, ಅದರ ಅಳತೆ ಮತ್ತು ಚಕ್ ಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿ ನಮ್ಮ ನಿವೇಶನದಲ್ಲಿ ಮನೆ ಕಟ್ಟಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆಕಟ್ಟಿ ಇಂದಿಗೆ ಅಂದಾಜು 3 ವರ್ಷ ಆಗಿದೆ. ಪ್ರತಿವಾದಿ ನನ್ನ ಜಾಗದಲ್ಲಿ ಮನೆ ಕಟ್ಟಿರುವ ಸಂಗತಿ 2018 ರಲ್ಲಿ ನನಗೆ ಗೊತ್ತಾಯಿತು. ನವೆಂಬರ್–ಡಿಸೆಂಬರ್ 2018 ರಲ್ಲಿ ನಾನು ಪುರಸಭೆಯಿಂದ ಸ್ಥಳ ತನಿಖೆ ಮಾಡಿಸಿದಾಗ ಪ್ರತಿವಾದಿ ನನ್ನ ನಿವೇಶನದಲ್ಲಿ ಮನೆಕಟ್ಟಿರುವುದು ಗೊತ್ತಾಯಿತು ಆಗ ಪುರಸಭೆಯವರು ನಿವೇಶನ ಮತ್ತು ಮನೆ ಬಿಟ್ಟುಕೊಡುವಂತೆ ಪ್ರತಿವಾದಿಗೆ ಹೇಳಿದರು. ಪುರಸಭೆಯವರು ಅಳತೆ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅಳತೆಗೆ ಬಂದಿದ್ದ ಪುರಸಭೆಯ ಅಧಿಕಾರಿಗಳ ಹೆಸರು ನನಗೆ ಗೊತ್ತಿಲ್ಲ. ಪುರಸಭೆಯಿಂದ ಯಾರೂ ಕೂಡ ದಾವಾ ಸ್ವತ್ತಿನ ಬಳಿ

ಬಂದಿಲ್ಲ, ಅಳತೆ ಮಾಡಿಲ್ಲ ಮತ್ತು ಪ್ರತಿವಾದಿಗೆ ಅಳತೆ ಸಮಯಕ್ಕೆ ಬರುವಂತೆ ಯಾವುದೇ ನೋಟೀಸ್ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಕಟ್ಟಿರುವ ಮನೆ ಹೊಡೆದು ಹಾಕಿ ನಿವೇಶನದ ಸ್ವಾಧೀನ ಕೋರಿ ನಾನು ಈದಾವೆ ಸಲ್ಲಿಸಿದ್ದೇನೆ. ದಿಃ 10.05.1990 ರಂದು ವಿ. ಮಂಜುನಾಥರವರ ಕಡೆಯಿಂದ ಬಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ವಿಸ್ತೀರ್ಣ 55 x 30 ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಚಕ್ ಬಂದಿ ಪೂರ್ವಕ್ಕೆ – ದೊಡ್ಡಹನುಮಂತಪ್ಪರವರ ಲೇ ಔಟ್, ಪಶ್ಚಿಮಕ್ಕೆ – 30 ಅಡಿ ರಸ್ತೆ, ಉತ್ತರಕ್ಕೆ– ನಿವೇಶನದ ಸಂ 38, ದಕ್ಷಿಣಕ್ಕೆ– ನಿವೇಶನ ನಂ 40 ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಕೊಂಡುಕೊಂಡು ಅದರಲ್ಲಿ ಮನೆ ಕಟ್ಟಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ಜಯರಾಮಯ್ಯ ತೀರಿ ಹೋದ ಮೇಲೆ , ಮೇಲೆ ಹೇಳಿದ ಸ್ವತ್ತಿನ ಖಾತೆ ವಾರಸ ಆಧಾರದ ಮೇಲೆ ಪ್ರತಿವಾದಿ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇದೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಪಾರ್ವತಮ್ಮ ಕಟ್ಟಿರುವ ಮನೆ ನಮ್ಮ ನಿವೇಶನದಲ್ಲಿ ಇದ್ದು ಕಾರಣ ಅದರ ಖಾತೆ ಕೂಡ ನನ್ನ ಹೆಸರಿನಲ್ಲಿ ಬರುತ್ತಿದೆ ಎಂದು ಹೇಳುತ್ತಾರೆ. ಜಯರಾಮ ದಿಃ 04.05.2011 ರಂದು ತೀರಿ ಹೋದ ಮೇಲೆ ದಿಃ 13.04.2016 ರಂದು ಪಾರ್ವತಮ್ಮ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡರು ಆಗ ಮೇಲೆ ಹೇಳಿದ ಸ್ವತ್ತು ಪ್ರತಿವಾದಿಯ ಭಾಗಕ್ಕೆ ಬಂತು ಎಂದರೆ ಸರಿಯಲ್ಲ. ಪ್ರತಿವಾದಿ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ಅದರಲ್ಲಿ

ವಾಸ ಇದ್ದಾರೆ ಎಂದರೆ ಸಾಕ್ಷಿ ನಮ್ಮ ಜಾಗದಲ್ಲಿ ಮನೆಕಟ್ಟಿಕೊಂಡು ವಾಸ ಇದ್ದಾರೆ ಎಂದು ಹೇಳುತ್ತಾರೆ. ಬಿ ಷೆಡ್ಯೂಲ್ ಸ್ವತ್ತಿನ ಖಾತೆ ಪಾರ್ವತಮ್ಮನ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಬಿ ಷೆಡ್ಯೂಲ್ ಚಕ್ ಬಂದಿ ತೋರಿಸಿದ್ದೇನೆ. ನಾನು ಈ ದಾವೆ ಸಲ್ಲಿಸಿದ ನಂತರ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಸಂಗತಿಗಳನ್ನು ಕೇಳಿ ತಿಳಿದುಕೊಂಡಿದ್ದೇನೆ . ಜಯರಾಮಯ್ಯನ ಹೆಸರಿಗೆ ಆಗಿರುವ ದಿಃ 10.05.1990 ರ ಕ್ರಯ ಪತ್ರ ರದ್ದು ಪಡಿಸುವಂತೆ ನಾನು ಈ ದಾವೆಯಲ್ಲಿ ಪಾರ್ಥಿಸಿಲ್ಲ. ಜಯರಾಮಯ್ಯ ತೀರಿಹೋದ ನಂತರ ಪ್ರತಿವಾದಿ ಮತ್ತು ಅವರ ಮಕ್ಕಳು ಮಾಡಿಕೊಂಡಿರುವ ವಿಭಾಗ ಪತ್ರವನ್ನು ರದ್ದುಪಡಿಸುವಂತೆ ಕೂಡ ನಾನು ಪಾರ್ಥಿಸಿಲ್ಲ. ಜಯರಾಮಯ್ಯನ ಹೆಸರಿನಲ್ಲಿ ಇದ್ದ ಮನೆಯ ಖಾತಾ ಮತ್ತು ಪ್ರತಿವಾದಿ ಹೆಸರಿನಲ್ಲಿರುವ ಮನೆಯ ಖಾತಾ ಪ್ರಶ್ನಿಸಿ ಅಪೀಲು ಸಲ್ಲಿಸಿದ್ದೆ. ಪ್ರತಿವಾದಿ ಸುಮಾರು 30 ವರ್ಷಗಳ ಹಿಂದೆ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡು ಅದರಲ್ಲಿ ಮನೆ ಕಟ್ಟಿ ಸ್ವಾಧೀನದಲ್ಲಿರುವುದರಿಂದ ಸದರಿ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂಗಿ ಸುಜಾತ ಇದೇ ರೀತಿ ಅವಳ ನಿವೇಶನ ಬೇರೆಯವರ ಹೆಸರಿನಲ್ಲಿ ಇದೆ ಎಂದು ಹೇಳಿ ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು Municipality ಗೆ ನನ್ನ ನಿವೇಶನ ಅಳತೆ ಮಾಡುವಂತೆ ಅರ್ಜಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಕಟ್ಟಿರುವ ಮನೆಯಲ್ಲಿ ನನಗೆ ಯಾವುದೇ ಹಕ್ಕು,ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರಿಗೆ ಆಗಿರುವ

ಕ್ರಯಪತ್ರ ಮತ್ತು ನನ್ನ ತಾಯಿ ನನಗೆ ಬರೆದುಕೊಟ್ಟಿರುವ ದಾನ ಪತ್ರಕ್ಕೂ ಬಿ ಷೆಡ್ಯೂಲ್ ಸ್ವತ್ತಿಗೂ ತಾಳೆ ಆಗುವುದಿಲ್ಲ ಮತ್ತು ಅವರೆಡಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ. ನ್ಯಾ.ನ. ಉ. ಲೇ. ಬೆ. ಮಾ.) ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .